ಕಾಳೇನಹಳ್ಳಿಯ ಬಳಿ ಆಂಜನೇಯ ಸ್ವಾಮಿ ದೇವಾಲಯಕ್ಕೂ ನೀರು ನುಗ್ಗಿದ್ದನ್ನು ಗ್ರಾಮಸ್ಥರು ನೆನಪಿಸಿಕೊಳ್ಳುತ್ತಾರೆ. '2007 ಹಾಗೂ 2016ರಲ್ಲೂ ನದಿ ಹರಿದಿತ್ತು, ಆದರೆ ಒಂದೆರಡು ದಿನ ಮಾತ್ರ, ಈಗಿನಂತೆ ವಾರಗಟ್ಟಲೆ ರಭಸವಾಗಿ ಹರಿದಿರಲಿಲ್ಲ, ಈಗಿನಂತೆ ಪರಿಗಿಯನ್ನೂ ಮುಟ್ಟಿರಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ ಕೊರಟಗೆರೆಯ ನರಸಿಂಹಲು ಬಾಬು.

ಬಯಲುಸೀಮೆ ಜಿಲ್ಲೆಗಳಲ್ಲಿರುವ ಜಯಮಂಗಲಿ, ಚಿತ್ರಾವತಿ, ಉತ್ತರ ಪಿನಾಕಿನಿ, ಹಗರಿಯಂತಹ ಅರೆವಾರ್ಷಿಕ ನದಿಗಳು ತುಂಬಿ ಹರಿಯುವುದು ತುಂಬಾ ಕಷ್ಟ. ಒಳ್ಳೆಯ ಮಳೆ ಬಂದಾಗಲೂ ಇವು ಹರಿಯುವುದಿಲ್ಲ. ಈ ವರ್ಷದಂತೆ ತಿಂಗಳುಗಟ್ಟಲೆ ರಭಸದ ಮಳೆ ಬಂದರಷ್ಟೇ ಅವುಗಳಿಗೆ ಜೀವ ಎಂಬಂತಾಗಿದೆ. ಕಾರಣ ಅತಿಯಾದ ಮರಳು ದೋಚುವಿಕೆ. ಮೋರಗಾನಹಳ್ಳಿಯ ತಿಮ್ಮಯ್ಯನವರು, 'ನಮ್ಮ ತಂದೆ, ತಾತಂದಿರು ಜಯಮಂಗಲಿಯಿಂದ ಹೊಲಕ್ಕೆ ನೀರು ಕಟ್ಟಲು ಹೋಗುತ್ತಿದ್ದೆವು. ಈಗ ನಮ್ಮ ಮಕ್ಕಳು ಆ ನದಿಯಲ್ಲಿಯೇ ಮರಳು ಬಗೆದು ಮಾರುತ್ತಿದ್ದಾರೆ. ಈ ಮರಳು ದೋಚಿದ ಗುಂಡಿಗಳು ನದಿಯ ಮೇಲಿನ ರಣಗಾಯಗಳಂತಾಗಿವೆ. ಆ ದೊಡ್ಡ ದೊಡ್ಡ ಮರಳುಗುಂಡಿಗಳೆಲ್ಲಾ ತುಂಬಿ ನೀರು ಮುಂದೆ ಸಾಗುವುದು ಸಾಧಾರಣ ಮಳೆಗೆ ಅಸಾಧ್ಯವೇ ಸರಿ' ಎನ್ನುತ್ತಾರೆ.

## ಮರಳು ರಕ್ಷಣೆ ಮತ್ತು ಭಕ್ಷಣೆ

ಮರಳು ಗಣಿಗಾರಿಕೆಗೆ ಸ್ವಯಂ ನಿಷೇಧ ಹಾಕಿಕೊಂಡ ಹಳ್ಳಿಗರ ಮಾದರಿಗೂ ಜಯಮಂಗಲಿ ನದಿ ಸಾಕ್ಷಿಯಾಗಿದೆ. ಬಹುಶಃ ರಾಜ್ಯದಲ್ಲಿ ಇದೊಂದು ಏಕೈಕ ಉದಾಹರಣೆ. ಮಧುಗಿರಿ ತಾಲ್ಲೂಕಿನಲ್ಲಿ ನದಿ ಹರಿಯುವ ಹಂದ್ರಾಳು ಗ್ರಾಮದಿಂದ ಕಾಳೇನಹಳ್ಳಿಯವರೆಗೂ ಹಾಗೂ ಪುರವರ ವ್ಯಾಪ್ತಿಯ ನದಿಯ ಹರಿವಿನಲ್ಲಿ, ವೀರಾಪುರ, ಮುದ್ದೇನಹಳ್ಳಿ, ಸ್ವಲ್ಪಮಟ್ಟಿಗೆ ರೆಡ್ಡಿಹಳ್ಳಿ, ಇಮ್ಮಡಿಗಾನಹಳ್ಳಿ ಗ್ರಾಮದಲ್ಲಿ ನದಿಯಿಂದ ಒಂದು ಕಾಳು ಮರಳು ತೆಗೆಯಲು ಅಲ್ಲಿನ ಸ್ಥಳೀಯರು ಅವಕಾಶ ಕೊಟ್ಟಿಲ್ಲ. ಅವರೂ ಮರಳು ಮುಟ್ಟುವುದಿಲ್ಲ, ಇತರೆ ಊರಿನವರು ಮರಳು ತೆಗೆಯಲೂ ಬಿಡುವುದಿಲ್ಲ. ಪ್ರಭಾವಿ ರಾಜಕಾರಣಿಗಳ ಒತ್ತಡ ಬಂದಾಗ್ಯೂ ಜನ ಅದಕ್ಕೆ ಸೊಪ್ಪು ಹಾಕದಿರುವುದು ಅವರ ದಿಟ್ಟತನಕ್ಕೆ ಸಾಕ್ಷಿ.

ಕಾಳೇನಹಳ್ಳಿಯ ಡಾ. ನರಸಿಂಹಯ್ಯ ಹಾಗೂ ಇತರ ಹಿರಿಯರು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಮನವಿ ಕೊಟ್ಟು ಸ್ಥಳೀಯರನ್ನು ಹುರಿದುಂಬಿಸಿ ಇದನ್ನು ಸಾಧ್ಯವಾಗಿಸಿದ್ದಾರೆ. 'ನಮ್ಮ ಕಷ್ಟಕ್ಕೆ ಪ್ರತಿಫಲವಾಗಿ ಎಂತಹ ಬರಗಾಲ ಬಂದರೂ ಈ ಭಾಗದಲ್ಲಿ ಅಂತರ್ಜಲ ಅಪಾಯದ ಮಟ್ಟಕ್ಕೆ ಇಳಿದಿಲ್ಲ, ಕುಡಿಯುವ ನೀರಿಗೆ ತೊಂದರೆಯಾಗಿಲ್ಲ, ನದಿಯಲ್ಲಿ ಮರಳು ಇರುವುದರಿಂದಲೇ ಇದು ಸಾಧ್ಯವಾಗಿದೆ' ಎನ್ನುತ್ತಾರೆ ನರಸಿಂಹಯ್ಯ. ಇವರ ಮರಳು ರಕ್ಷಣೆ ಪ್ರಯತ್ನ ವಿವಿಧ ಪತ್ರಿಕೆಗಳಲ್ಲಿ ಸುದ್ದಿಯೂ ಆಗಿದೆ. 'ಸುಮಾರು ಐದು ಕಿಲೋಮೀಟರ್ ಉದ್ದಕ್ಕೆ ನದಿಯಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಲಾಗಿದೆ' ಎನ್ನುತ್ತಾರೆ.



ದೇವರಾಯನದುರ್ಗದಲ್ಲಿ ನಡೆಯುತ್ತಿರುವ ನಿರ್ಮಾಣ ಕಾರ್ಯ



ಜಯಮಂಗಲಿ ನದಿ 2006ರಲ್ಲೂ ಸ್ವಲ್ಪ ದೂರ ಹರಿದು ತನ್ನ ಅಸ್ತಿತ್ವ ಪ್ರಕಟಪಡಿಸಿತ್ತು.



ಡ್ರೋಣ್‌ನಲ್ಲಿ ನದಿ ತುಂಬಿ ಹರಿಯುವ ದೃಶ್ಯ

ಒಳ್ಳೆ ಮಳೆ ಆದ ವರ್ಷ ನದಿ ಹರಿಯದಿದ್ದರೂ ಈ ಮರಳಿನಲ್ಲಿ ಒರತೆ ತೋಡಿದರೆ ನೀರು ಬರುತ್ತದೆ. ನೀರು ಇಂಗಿ ಅಂತರ್ಜಲ ಮಟ್ಟ ಉತ್ತಮವಾಗಿರುತ್ತದೆ. ಇದರಿಂದ ಸುತ್ತಮುತ್ತಲ ಕೊಳವೆಬಾವಿಗಳಿಗೆ ನೀರು. ಈ ಗುಟ್ಟು ಬಲ್ಲ ರೈತರು ಮರಳು ತೆಗೆಯಲು ಬಿಟ್ಟಿಲ್ಲ. ಆದರೆ ರೈತರ ನಿಷೇಧವಿರುವ ನದಿಯ ಭಾಗ ಹೊರತುಪಡಿಸಿ ಉಳಿದೆಲ್ಲಾ ಕಡೆ ಜಯಮಂಗಲಿಯ ಮರಳ ಖಜಾನೆ ಖಾಲಿ.

ಮರಳು ತೆಗೆದಿರುವ ಕಡೆಯೆಲ್ಲಾ ಸೀಮೆಜಾಲಿ ಪೊದೆಗಳು ವೇಗವಾಗಿ ವ್ಯಾಪಿಸಿವೆ. ಆ ಪೊದೆಗಳೂ ನೀರು ಸರಾಗವಾಗಿ ಹರಿಯಲು ಅಡ್ಡಿ. ಒತ್ತುವರಿ ಜಯಮಂಗಲಿಗಿರುವ ಮತ್ತೊಂದು ಆಪತ್ತು. ದಡದಲ್ಲಿ ಜಮೀನಿರುವವರು ಒತ್ತರಿಸಿ ಬೇಲಿ ಹಾಕಿ ತೆಂಗು–ಅಡಿಕೆ ತೋಟಗಳನ್ನು ಮಾಡಿದ್ದಾರೆ. ಇನ್ನು, ಹಳ್ಳಿ–ಪಟ್ಟಣಗಳ ಪಕ್ಕದಲ್ಲಿ ನದಿ ದಂಡೆಗೆ ಮಣ್ಣು ಸುರಿದು ಎತ್ತರ ಮಾಡಿ ಅಂಗಡಿ, ಹೋಟೆಲ್ಲುಗಳನ್ನಿಟ್ಟಿದ್ದಾರೆ. ಸದಾ ಹರಿಯುವ ನದಿಗಳನ್ನೇ ಬಿಡದ ಭೂದಾಹಿಗಳು ಇನ್ನು ಕಾಲು ಶತಮಾನಕ್ಕೊಮ್ಮೆ ಹರಿಯುವ ಜಯಮಂಗಲಿಯನ್ನು ಬಿಟ್ಟಾರೆಯೇ?

ಮರಳು ತೋಡಿ ನದಿ ಪಾತ್ರ ಎಷ್ಟು ಆಳವಾಗಿದೆ ಎಂಬುದಕ್ಕೆ ಕೊರಟಗೆರೆಯ ವೆಂಕಟೇಶ್ ಒಂದು ಉದಾಹರಣೆ ಕೊಡುತ್ತಾರೆ. ನದಿಯಿಂದ ಅಕ್ಕಿರಾಂಪುರ ಕೆರೆಗೆ ನೀರು ಹರಿಯಲು ಸುಮಾರು 2 ಕಿ.ಮೀ.ನಷ್ಟು ಉದ್ದದ ಕಾಲುವೆ ಇದೆ. ನದಿ ತುಂಬಿ ಹರಿದಾಗ ಮಾತ್ರ ಈ ಕಾಲುವೆಗೆ ನೀರು ಹರಿಯುತ್ತದೆ. ಸಾಧಾರಣ ಹರಿವಿದ್ದಾಗ ಸ್ವಲ್ಪ ಮೇಲ್ಮಟ್ಟದಲ್ಲಿರುವ ಕಾಲುವೆಗೆ ನೀರು ಹರಿಯುವುದಿಲ್ಲ. ಈ ಸಲ ನದಿ ಉಕ್ಕಿ ಹರಿದರೂ ಸಹ ಈ ಕಾಲುವೆಗೆ ಹೆಚ್ಚು ನೀರು ಹರಿದಿಲ್ಲ. ಅಂದರೆ ನದಿಯನ್ನು ಅಷ್ಟು ಆಳ ಮಾಡಿದ್ದಾರೆ ಮರಳು ತೆಗೆಯುವವರು.

'ಅಕ್ಕಿರಾಂಪುರ ಕೆರೆಗೆ ಜಯಮಂಗಲಿಯ ಕೆಂಪು ನೀರು (ಉಕ್ಕಿ ಹರಿದಾಗ ಬರುವ ಹೊಸ ನೀರು) ಮಾತ್ರ ಹರಿಸಿಕೊಳ್ಳಬೇಕೆಂದೂ, ತಿಳಿನೀರನ್ನು ಯಾವುದೇ ಕಾರಣಕ್ಕೂ ಹರಿಸಿಕೊಳ್ಳಬಾರದೆಂದೂ ನೂರಾರು ವರ್ಷಗಳ ಹಿಂದೆಯೇ ಆಂಧ್ರದ ರೈತರಿಗೂ ಅಕ್ಕಿರಾಂಪುರದ ರೈತರಿಗೂ ಒಪ್ಪಂದವಾಗಿದೆ' ಎಂಬ ಅಪರೂಪದ